ಚಾಸಾ-18 ಪ್ರಾಸಾ- 10

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ**

**ಸಿಸಿ ನಂ. 430/2018**

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 25-07-2025

| | | |
|---|---|---|
| ಹೆಸರು | : | ಜಾಕೀರ |
| ತಂದೆಯ ಹೆಸರು | : | ಹುಸೇನಸಾಬ ಇನಾಂದಾರ |
| ವಯಸ್ಸು | : | 53 ವರ್ಷ |
| ಉದ್ಯೋಗ | : | Dy.S.P. ಲೋಕಾಯುಕ್ತ |
| ವಾಸಸ್ಥಳ | : | ಯಾದಗಿರಿ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಜುಲೈ 2017 ರಿಂದ ಮಾರ್ಚ 2018 ರವರೆಗೆ ಅಫಜಲಪೂರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01-03-2018 ರಂದು ಚಾಸಾ 17 ರವರಿಂದ ಈ ಪ್ರಕರಣದ ಕಡತಗಳನ್ನು ಪಡೆದುಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತೇನೆ. ಸದರಿ ದಿನದಂದು ಈ ಪ್ರಕರಣದ ಆರೋಪಿ ಕಚೇರಿಗೆ ಹಾಜರಾಗಿದ್ದು ಆತನನ್ನು ವಿಚಾರಿಸಿ ದಸ್ತಗಿರಿ ನಿಯಮ ಪಾಲನೆ ಮಾಡಿ ಯೋಗ್ಯ ಜಾಮೀನು ಪಡೆದು ಬಿಡುಗಡೆ ಗೊಳಿಸಿರುತ್ತೇನೆ. ಅದೇ ದಿನ ಆರೋಪಿಯ ಕರ್ತವ್ಯ ಹಾಜರಾತಿ ದಾಖಲೆಯನ್ನು ಪಡೆದಿರುತ್ತೇನೆ ಮತ್ತು ಅಪಘಾತಕ್ಕೆ ಒಳಗಾದ ಬಸ್ಸಿನ ದಾಖಲಾತಿಗಳನ್ನು ಸಹ ಪಡೆದಿರುತ್ತೇನೆ. ಅದೇ ದಿನ ಚಾಸಾ 12 ರವರಿಗೆ ಚಾಸಾ 12 ರವರಿಂದ ಬಸ್ಸಿನ ದಾಖಲಾತಿಗಳನ್ನು ಪಡೆದು ಬಸ ಬಿಡುಗಡೆ ಮಾಡಿರುತ್ತೇನೆ. ಚಾಸಾ 11 ಮತ್ತು 12 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 12-04-2018 ರಂದು MVA ವರದಿ ಪಡೆದಿದ್ದು ತದನಂತರ ಮುಂದಿನ ತನಿಖೆಗಾಗಿ ಚಾಸಾ 19 ರವರಿಗೆ ಕಡತಗಳನ್ನು ವರ್ಗಾಯಿಸಿರುತ್ತೇನೆ.

ಸಾಕ್ಷಿಗೆ ಇಂಡೆಮನಿಟಿ ಬಾಂಡನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**15** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**15**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ MVA ವರದಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**13** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**13**(ಎ) ಎಂದು ಗುರುತಿಸಲಾಯಿತು.

ಆರೋಪಿಯ ಹಾಜರಾತಿ ಪ್ರಮಾಣ ಪತ್ರವನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**16** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**16**(ಎ) ಎಂದು ಗುರುತಿಸಲಾಯಿತು.

EKRTC ರವರು ಚಾಸಾ 12 ರವರಿಗೆ ನೀಡಿದ ಅಧಿಕಾರ ಪತ್ರವನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **17** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**17**(ಎ) ಎಂದು ಗುರುತಿಸಲಾಯಿತು.

ಜಪ್ತಿ ಪಡಿಸಿಕೊಂಡ ವಾಹನಗಳ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ **3** ರಿಂದ **10** ಎಂದು ಗುರುತಿಸಲಾಗಿದೆ.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **ASK** ಪರವಾಗಿ **ASJ** ವಕೀಲರಿಂದಃ-</u>

ದಿಃ 01-03-2018 ರಂದು ಚಾಸಾ 17 ರವರಿಂದ ಈ ಪ್ರಕರಣದ ಕಡತಗಳನ್ನು ಪಡೆದುಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ಈ ಪ್ರಕರಣದ ಆರೋಪಿ ಕಚೇರಿಗೆ ಹಾಜರಾಗಿದ್ದು ಆತನನ್ನು ವಿಚಾರಿಸಿ ದಸ್ತಗಿರಿ ನಿಯಮ ಪಾಲನೆ ಮಾಡಿ ಯೋಗ್ಯ ಜಾಮೀನು ಪಡೆದು ಬಿಡುಗಡೆ ಗೊಳಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿನ ಆರೋಪಿಯ ಕರ್ತವ್ಯ ಹಾಜರಾತಿ ದಾಖಲೆಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಗಾದ ಬಸ್ಸಿನ ದಾಖಲಾತಿಗಳನ್ನು ಸಹ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 12 ರವರಿಗೆ

ಚಾಸಾ 12 ರವರಿಂದ ಬಸ್ಸಿನ ದಾಖಲಾತಿಗಳನ್ನು ಪಡೆದು ಬಸ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 11 ಮತ್ತು 12 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಯಾವುದೇ ತನಿಖೆ ಮಾಡದೇ ಆರೋಪಿತನ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 12-04-2018 ರಂದು MVA ವರದಿ ಪಡೆದಿದ್ದು ತದನಂತರ ಮುಂದಿನ ತನಿಖೆಗಾಗಿ ಚಾಸಾ 19 ರವರಿಗೆ ಕಡತಗಳನ್ನು ವರ್ಗಾಯಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 11 ಮತ್ತು 12 ರವರ ಹೇಳಿಕೆಯನ್ನು ಕಚೇರಿಯಲ್ಲಿ ಪಡೆದಿರುತ್ತೇನೆ ಈ ಮಾತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ